# ಶ್ರೀ ಗಣಪತಿ

## ಮನೋಗತ

ಯಾವುದಾದರೊಂದು ದೇವತೆಯ ಬಗ್ಗೆ ನಮಗೆ ಅಧ್ಯಾತ್ಮಶಾಸ್ತ್ರೀಯ ಜ್ಞಾನವು ದೊರಕಿದರೆ ಆ ದೇವತೆಯ ಬಗೆಗಿನ ನಮ್ಮ ಶ್ರದ್ಧೆಯು ಹೆಚ್ಚಾಗಲು ಸಹಾಯವಾಗುತ್ತದೆ. ಶ್ರದ್ಧೆಯಿಂದ ಸಹಜವಾಗಿಯೇ ಉಪಾಸನೆಯು ಭಾವಪೂರ್ಣವಾಗಿ ಆಗಲು ಸಹಾಯವಾಗುತ್ತದೆ ಮತ್ತು ಭಾವಪೂರ್ಣ ಉಪಾಸನೆಯೇ ಹೆಚ್ಚು ಫಲದಾಯಕವಾಗಿರುತ್ತದೆ. ಈ ದೃಷ್ಟಿಯಿಂದ ಈ ಗ್ರಂಥದಲ್ಲಿ ಶ್ರೀ ಗಣಪತಿಗೆ ಸಂಬಂಧಿಸಿದ ಸಾಮಾನ್ಯವಾಗಿ ಎಲ್ಲಿಯೂ ದೊರಕದ; ಆದರೆ ಉಪಯುಕ್ತವಿರುವಂತಹ ಅಧ್ಯಾತ್ಮಶಾಸ್ತ್ರೀಯ ಜ್ಞಾನವನ್ನು ನೀಡುವಲ್ಲಿ ಒತ್ತು ಕೊಡಲಾಗಿದೆ. –

ಗಣಪತಿಯ ಪ್ರಮುಖ ಹೆಸರುಗಳ ಭಾವಾರ್ಥ; ದೇವತೆಗಳ ಪ್ರಕಾಶಭಾಷೆ ಮತ್ತು ಮಾನವರ ನಾದಭಾಷೆಗಳನ್ನು ಪರಸ್ಪರ ರೂಪಾಂತರಗೊಳಿಸುವ, ಪ್ರಾಣಶಕ್ತಿಯನ್ನು ಹೆಚ್ಚಿಸುವ ಮುಂತಾದ ಗಣಪತಿಯ ಕಾರ್ಯ ಮತ್ತು ವೈಶಿಷ್ಟ್ಯಗಳು; ಬಲಗಡೆ ಮತ್ತು ಎಡಗಡೆ ಸೊಂಡಿಲಿರುವ ಗಣಪತಿಯ ಮಹತ್ವ, ಗಣಪತಿಗೆ ದೂರ್ವೆ ಮತ್ತು ಕೆಂಪು ಹೂವುಗಳನ್ನು ಏಕೆ ಅರ್ಪಿಸುತ್ತಾರೆ; ದೂರ್ವೆಯ ಉದ್ದ, ಸಂಖ್ಯೆ ಮತ್ತು ಅರ್ಪಿಸುವ ಪದ್ಧತಿ; ಚತುರ್ಥಿ ಮತ್ತು ಚಂದ್ರ ಇವರ ಸಂಬಂಧ; ಇದರೊಂದಿಗೆ ಸಾರ್ವಜನಿಕ ಗಣೇಶೋತ್ಸವಗಳ ಸದ್ಯದ ದಯನೀಯ ಸ್ಥಿತಿಯನ್ನು ನೋಡಿದಾಗ 'ಅವು ಹೇಗಿರಬಾರದು ಮತ್ತು ಹೇಗಿರಬೇಕು' ಮುಂತಾದವುಗಳ ವಿವೇಚನೆಯನ್ನು ಈ ಗ್ರಂಥದಲ್ಲಿ ಸ್ವಲ್ಪದರಲ್ಲಿ ಮಾಡಲಾಗಿದೆ.

ಶ್ರೀ ಗಣಪತಿಯ ಬಗೆಗಿನ ಈ ಆಧ್ಯಾತ್ಮಿಕ ಶಾಸ್ತ್ರೀಯ ಜ್ಞಾನ ಗಣೇಶಭಕ್ತರಿಗೆ ಮತ್ತು ಗಣಪತಿಯ ಸಾಂಪ್ರದಾಯಿಕ ಸಾಧನೆ ಮಾಡುವವರಿಗೆ ಖಂಡಿತವಾಗಿಯೂ ಉಪಯುಕ್ತವಾಗಬಹುದು; ಆದರೆ ಸಾಮಾನ್ಯ ವ್ಯಕ್ತಿಯು ಇದರ ಕುರಿತು ಮುಂದಿನ ನಿಯಮವನ್ನು ಗಮನದಲ್ಲಿಟ್ಟುಕೊಳ್ಳಬೇಕು. ರಾಮಾಯಣವನ್ನು ಓದಿದಾಗ ರಾಮನ, ಗಣೇಶಪುರಾಣ ಅಥವಾ ಶ್ರೀ ಗಣಪತಿ ಅಥರ್ವಶೀರ್ಷವನ್ನು ಓದಿದಾಗ ಶ್ರೀ ಗಣೇಶನ ಮತ್ತು ದೇವೀಮಹಾತ್ಮೆಯನ್ನು ಓದಿದಾಗ ದೇವಿಯ ಉಪಾಸನೆ ಮಾಡಬೇಕೆಂದು ಕೆಲವರಿಗೆ ಅನಿಸುತ್ತದೆ. ಅದರಂತೆಯೇ ಈ ಪುಸ್ತಕದಲ್ಲಿರುವ ಜ್ಞಾನವನ್ನು ಓದಿ 'ನಾವೂ ಗಣಪತಿಯ ಉಪಾಸನೆ ಮಾಡಬೇಕೆಂದು' ಕೆಲವರಿಗೆ ಅನಿಸುವ ಸಾಧ್ಯತೆಯಿದೆ. ಇಂತಹ ವ್ಯಕ್ತಿಗಳು ಈ ರೀತಿಯ ಉಪಾಸನೆಯಿಂದ ಎಲ್ಲರ ಆಧ್ಯಾತ್ಮಿಕ ಉನ್ನತಿಯು ಶೀಘ್ರವಾಗಿ ಆಗುವುದಿಲ್ಲ, ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಏಕೆಂದರೆ ಗಣಪತಿ ಮುಂತಾದವರ ಉಪಾಸನೆ ಮಾಡುವುದು ಅವರಿಗೆ ಆವಶ್ಯಕವಾಗಿದ್ದರೆ ಮಾತ್ರ ಅದರಿಂದ ಅವರಿಗೆ ಹೆಚ್ಚಿನ ಲಾಭವಾಗುತ್ತದೆ. ಇಲ್ಲದಿದ್ದರೆ ಬಹಳ ಕಾಲ ಸಾಧನೆಯನ್ನು ಮಾಡಿದರೂ ಬಹಳ ಕಡಿಮೆ ಪ್ರಗತಿಯಾಗುತ್ತದೆ. 'ಗಣಪತಿಯ

ಉಪಾಸನೆಯು ಮುಂದಿನ ಹಂತದ ಉಪಾಸನೆಯಾಗಿದೆ ಮತ್ತು ಅದನ್ನು ಮಾಡುವುದು ಆವಶ್ಯಕವಾಗಿದೆಯೋ ಅಥವಾ ಇಲ್ಲವೋ' ಎನ್ನುವುದು ಸರ್ವ ಸಾಧಾರಣ ವ್ಯಕ್ತಿಗಳಿಗೆ ತಿಳಿಯದೇ ಆಧ್ಯಾತ್ಮಿಕ ದೃಷ್ಟಿಯಿಂದ ಉನ್ನತರಾಗಿರುವವರೇ ಅದನ್ನು ಹೇಳಬಲ್ಲರು; ಆದುದರಿಂದ ಸಾಮಾನ್ಯ ವ್ಯಕ್ತಿಯು ಕೇವಲ ಜ್ಞಾನವೆಂದು ಮಾತ್ರ ಈ ಗ್ರಂಥವನ್ನು ಓದಬೇಕು. ಸಾಧನೆಯ ಕುರಿತು ಅನುಭೂತಿ ಬರುವ ದೃಷ್ಟಿಯಿಂದ ಸಾಧನೆಯ ಮೊದಲನೆಯ ಹಂತವೆಂದು ತಮ್ಮ ಕುಲದೇವತೆಯ ಹೆಸರಿನ 'ಶ್ರೀ... (ಕುಲದೇವಿ / ಕುಲದೇವರ ಹೆಸರಿನ ಚತುರ್ಥಿ ಪ್ರತ್ಯಯ)... ನಮಃ ।' ಈ ಪದ್ಧತಿಯಿಂದ (ಉದಾ. ಕುಲದೇವಿಯು ಶ್ರೀ ಭವಾನೀದೇವಿಯಾಗಿದ್ದರೆ, 'ಶ್ರೀ ಭವಾನೀ ದೇವ್ಯೈ ನಮಃ ।' ಹೀಗೆ) ನಾಮಜಪ ಮಾಡಬೇಕು. ಮುಂದೆ ಗುರುಗಳು ಗಣಪತಿಯ ಜಪವನ್ನು ಮಾಡಲು ಹೇಳಿದರೆ, ಆಗ ಗಣಪತಿಯ ಮೇಲಿನ ಶ್ರದ್ಧೆಯನ್ನು ಹೆಚ್ಚಿಸಲು ಈ ಜ್ಞಾನವು ಉಪಯೋಗಕ್ಕೆ ಬರುವುದು. ಇತರರಿಗೆ ಈ ಗ್ರಂಥದಲ್ಲಿನ ಜ್ಞಾನವನ್ನು ಓದಿ 'ಗಣಪತಿಯ ಬಗ್ಗೆ ಏನಾದರೂ ಹೊಸ ಮಾಹಿತಿಯು ತಿಳಿಯಿತು', ಎಂದು ಅನಿಸಬಹುದು.

ಈ ಗ್ರಂಥವನ್ನು ಓದಿ ಗಣಪತಿಯ ಉಪಾಸಕರಿಗೆ ಗಣಪತಿಯ ಮೇಲಿನ ಶ್ರದ್ಧೆಯು ದೃಢವಾಗಲಿ ಮತ್ತು ಅವರಿಗೆ ಹೆಚ್ಚು ಸಾಧನೆಯನ್ನು ಮಾಡಲು ಪ್ರೇರಣೆ ಸಿಗಲಿ ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ. – ಸಂಕಲನಕಾರರು


**ಕರ್ಮಬಂಧನದಿಂದ ಮುಕ್ತರಾಗಲು ನಾಮದ ಮಹತ್ವ ಹೇಳುವ ಸನಾತನದ ಗ್ರಂಥ !**

**ನಾಮಜಪ ಮಾಡುವ ಪದ್ಧತಿ**



- ಸಾಧನೆಯ ಪ್ರಾರಂಭದಲ್ಲಿ ನಾಮಜಪವನ್ನೇಕೆ ಬರೆಯಬೇಕು ?
- ವೈಖರಿ, ಮಧ್ಯಮಾ, ಪಶ್ಯಂತಿ ಮತ್ತು ಪರಾ ವಾಣಿಯ ನಾಮಜಪಗಳ ವೈಶಿಷ್ಟ್ಯ
- ನಾಮಜಪ ಮಾಡುವ ಮುನ್ನ ಪ್ರಾರ್ಥನೆ ಮಾಡಿದರೆ ಏನು ಲಾಭವಾಗುತ್ತದೆ ?
- ನಾಮಜಪ ಎಣಿಸಲು ಎಂತಹ ಮಣಿಗಳ ಮಾಲೆ ತೆಗೆದುಕೊಳ್ಳಬೇಕು ?
- ವಿಚಾರ ಬರದೇ ಏಕಾಗ್ರತೆಯಿಂದ ನಾಮಜಪವಾಗಲು ಏನು ಮಾಡಬೇಕು ?

## ಅನುಕ್ರಮಣಿಕೆ


೧. ವ್ಯುತ್ಪತ್ತಿ ಮತ್ತು ಅರ್ಥ ೧೫
೨. ಇತರ ಕೆಲವು ಹೆಸರುಗಳು ಮತ್ತು ಅವುಗಳ ಅರ್ಥ ೧೫
೩. ಮಹಾಗಣಪತಿ ೨೦
೪. ವ್ಯಾಪ್ತಿ ೨೦
೫. ಮಹತ್ವ ೨೧
೬. ಕಾರ್ಯ ಮತ್ತು ವೈಶಿಷ್ಟ್ಯಗಳು ೨೧
೭. ಯುಗಗಳಿಗನುಸಾರ ಅವತಾರ ೨೪
೮. ಪರಿವಾರ ಮತ್ತು ಅದರ ಭಾವಾರ್ಥ ೨೫
೯. ಸನಾತನ ನಿರ್ಮಿತ ಶ್ರೀ ಗಣಪತಿಯ ಸಾತ್ತ್ವಿಕ 'ಚಿತ್ರ' ಮತ್ತು 'ನಾಮಪಟ್ಟಿ' ೨೬
೧೦. ಮೂರ್ತಿವಿಜ್ಞಾನ ೩೩
೧೧. ಭೂಲೋಕದಲ್ಲಿನ ಸ್ಥಾನಗಳು (ಸ್ವಯಂಭೂ ಗಣಪತಿ) ೪೩
೧೨. ಉಪಾಸನೆ ೪೫
೧೩. ಸಂಪ್ರದಾಯ ಮತ್ತು ಕೆಲವು ಶ್ರೇಷ್ಠ ಗಣೇಶಭಕ್ತರು ೯೭
೧೪. ಶ್ರೀ ಗಣಪತಿ ಮತ್ತು ಇತರರು ೯೯
೧೫. ಶ್ರೀ ಗಣಪತಿಯ ಸಂದರ್ಭದಲ್ಲಿನ ಅನುಭೂತಿಗಳು ೧೦೦
೧೬. ಸಾರ್ವಜನಿಕ ಶ್ರೀ ಗಣೇಶೋತ್ಸವ : ಹೇಗಿರಬಾರದು ಮತ್ತು ಹೇಗಿರಬೇಕು ? ೧೦೧



'ಮುಂಬರುವ ಆಪತ್ಕಾಲದ ಸಂಜೀವಿನಿ' ಗ್ರಂಥಮಾಲಿಕೆಯ ಗ್ರಂಥ : **ಅಗ್ನಿಹೋತ್ರ**

ಮುಂಬರುವ ಮೂರನೇ ಮಹಾಯುದ್ಧದಲ್ಲಿ ಬಳಕೆಯಾಗುವ ಅಣ್ವಸ್ತ್ರಗಳು ಹೊರಸೂಸುವ ವಿಕಿರಣಗಳ ಪ್ರಭಾವವನ್ನು ನಾಶಗೊಳಿಸಬಲ್ಲ, ಸುಲಭ ಮತ್ತು ಕಡಿಮೆ ಸಮಯದಲ್ಲಾಗುವ ಯಜ್ಞವಿಧಿಯೇ 'ಅಗ್ನಿಹೋತ್ರ' ! ಈ ಗ್ರಂಥದ ಮೂಲಕ ಅಗ್ನಿಹೋತ್ರದ ಮಹತ್ವ ಅರಿತುಕೊಳ್ಳಿ ಮತ್ತು ಆಪತ್ಕಾಲದಲ್ಲಿ ನಿಮ್ಮ ಕುಟುಂಬ ರಕ್ಷಿಸಿಕೊಳ್ಳಿ !

